OS No.379-2021
Pw1

ದಿನಾಂಕ 23.07.2025 ರಂದು ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಿಂದಃ**

ನಾನು ಎಲ್.ಎಲ್.ಬಿ ಪದವಿದರನಾಗಿರುತ್ತೇನೆ. ಯಾವ ಪರಿಹಾರಕ್ಕಾಗಿ ದಾವಾ ಹೂಡಿರುತ್ತೀರಿ ಎಂದರೆ Adverse possession ಪರಿಹಾರಕ್ಕಾಗಿ ಹೂಡಿರುತ್ತೇವೆ ಎಂದು ನುಡಿದಿರುತ್ತಾರೆ. ಸದರಿ ಪರಿಹಾರವನ್ನು ಹೊರತು ಪಡಿಸಿ ಬೇರೆ ಪರಿಹಾರ ಕೇಳಿರುತ್ತೀರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ಈ ದಾವಾವನ್ನು ಯಾರ ಯಾರ ವಿರುದ್ದ ಹೂಡಿರುತ್ತೀರಿ ಎಂದರೆ ಸಾವಿತ್ರಿ ಮತ್ತು ಸರ್ಕಾರದ ವಿರುದ್ದ ಹೂಡಿರುತ್ತೇವೆ ಎಂದು ನುಡಿದಿರುತ್ತಾರೆ. ಸರ್ಕಾರದವನ್ನು ಏಕೆ ಪಕ್ಷಗಾರರನ್ನಾಗಿ ಮಾಡಿರುತ್ತೀರಿ ನಮ್ಮ ಹೆಸರಿಗೆ ದಾವಾ ಸ್ವತ್ತಿನ ಖಾತೆ ಇದ್ದು ಅದನ್ನು ಬೇರೆಯವರ ಹೆಸರಿಗೆ ಮಾಡಿರುವ ಕಾರಣ ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. ದಾವಾ ಹೂಡುವ ಮುನ್ನ ಪ್ರತಿವಾದಿಗಳಿಗೆ ನೋಟಿಸ್ ಅನ್ನು ನೀಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ಸದರಿ ನೋಟಿಸ್ ನೀಡದೆ ಇರುವ ಕಾರಣ ದಾವಾ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೆ ನಂ. ಮತ್ತು ವಿಸ್ತೀರ್ಣ ಗೊತ್ತಿದೆಯಾ ಎಂದರೆ ಸರ್ವೆ ನಂ.23/2 ರಲ್ಲಿ 31 ಗುಂಟೆ, ಸರ್ವೆ ನಂ. 24/2 ರಲ್ಲಿ 1 ಎಕರೆ 7 ಗುಂಟೆ ಎಂದು ನುಡಿದಿರುತ್ತಾರೆ. ಸರ್ವೆ ನಂ. 23/2 ರಲ್ಲಿ ಒಟ್ಟು ವಿಸ್ತೀರ್ಣ ಎಷ್ಟು ಇರುತ್ತದೆ ಎಂದರೆ 2 ಎಕರೆ 11 ಗುಂಟೆ ಎಂದು ನುಡಿದಿರುತ್ತಾರೆ. ದಾವಾ ಅನುಸೂಚಿ ಸ್ವತ್ತಿನಲ್ಲಿ ಸದರಿ ವಿಸ್ತೀರ್ಣ ಹೇಳಿರುತ್ತೀರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ಸರ್ವೆ ನಂ. 23/2 ರಲ್ಲಿ 2 ಎಕರೆ 11 ಗುಂಟೆ ಪೈಕಿ 31 ಗುಂಟೆ ಎಂದು ದಾವಾ ಅನುಸೂಚಿ ಸ್ವತ್ತಿನಲ್ಲಿ ಹೇಳಿರುತ್ತೀರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ಮುಂದುವರೆದು ವಾದ ಪತ್ರದಲ್ಲಿ ಹೇಳಿರುತ್ತೇನೆ ಎಂದು ನುಡಿದಿರುತ್ತಾರೆ. ದಾವಾ ಅನುಸೂಚಿ ಐಟಂ ನಂ.2 ರ ಸ್ವತ್ತಿನಲ್ಲಿ ಸರ್ವೆ ನಂ.24/2 ರ ಒಟ್ಟು ವಿಸ್ತೀರ್ಣವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸರ್ವೆ ನಂ.24/2 ರ ಒಟ್ಟು ವಿಸ್ತೀರ್ಣದ ಪೈಕಿ 1 ಎಕರೆ 7 ಗುಂಟೆ ಎಂದು ಹೇಳಿರುವುದಿಲ್ಲ ಎಂದರೆ ಸರಿ, ಮುಂದುವರೆದು ವಾದ ಪತ್ರದಲ್ಲಿ ಹೇಳಿರುತ್ತೇನೆ ಎಂದು ನುಡಿದಿರುತ್ತಾರೆ.

ದಾವಾ ಹೂಡುವ ಕಾಲಕ್ಕೆ ದಾವಾ ಸ್ವತ್ತಿನ ಮಾರುಕಟ್ಟೆ ಮೌಲ್ಯ ಎಷ್ಟು ಇತ್ತು ಎಂದರೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 2021 ರಲ್ಲಿ ದಾವಾ ಸ್ವತ್ತುಗಳ ಮಾರುಕಟ್ಟೆ ಮೌಲ್ಯ 40-45 ಲಕ್ಷ ಇತ್ತು ಎಂದರೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 2021 ರಲ್ಲಿ ದಾವಾ ಸ್ವತ್ತುಗಳ ಮಾರುಕಟ್ಟೆ ಮೌಲ್ಯ ಎಷ್ಟು ಇತ್ತು ಎಂಬ ಬಗ್ಗೆ ದಾಖಲೆಯನ್ನು ಹಾಜರುಪಡಿಸುವಿರಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿನ ಮಾರುಕಟ್ಟೆ ಮೌಲ್ಯಕ್ಕೆ ಸಂಬಂಧಿಸಿದಂತೆ

ನ್ಯಾಯಾಲಯದ ಶುಲ್ಕವನ್ನು ಕಟ್ಟಿರುತ್ತೀರಾ ಎಂದರೆ ನಮ್ಮ ವಕೀಲರು ಕಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಮುಂದುವರೆದ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ನೀವು ಸರಿಯಾದ ನ್ಯಾಯಾಲಯದ ಶುಲ್ಕವನ್ನು ಕಟ್ಟದೆ ಇರುವ ಕಾರಣ ಈ ದಾವಾ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

**ಪ್ರತಿವಾದಿ ಪರ ವಕೀಲರು ಮುಂದುವರೆದ ವಾಟೀ ಸವಾಲಿಗೆ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಗಿದೆ)

ಓ ಹೇ ಕೇ ಸ ಇದೆ

**1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ.**